ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magzine*

ಸಂಪುಟ 4 ಸಂಚಿಕೆ 17 ಮೇ 2019




ಊಟಿಯಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ನಡೆದ ಜೀವನೋತ್ಸಾಹ ಶಿಬಿರದಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಪ್ರವಚನ ನೀಡುತ್ತಿರುವುದು. ಚಿತ್ರದಲ್ಲಿ ಶ್ರೀ ಗೊ.ರು. ಚನ್ನಬಸಪ್ಪ, ಪೂಜ್ಯ ಜಗದ್ಗುರುಗಳವರು ಮತ್ತು ಊಟಿಯ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್.ಪಿ. ಧನಪಾಲ್ ಇದ್ದಾರೆ




ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಗುಂಡ್ಲುಪೇಟೆಯಲ್ಲಿ ನಡೆದ ವಿಚಾರಸಂಕಿರಣವನ್ನು ಕನಕಪುರ ಶ್ರೀಗಳವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಮುಡಿಗುಂಡಂ ಶ್ರೀಗಳು, ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, ಪೂಜ್ಯ ಜಗದ್ಗುರುಗಳವರು, ಪಡಗೂರು ಶ್ರೀಗಳು, ಚುಂಚನಹಳ್ಳಿ ಶ್ರೀಗಳು




ಸುತ್ತೂರು ಶ್ರೀಕ್ಷೇತ್ರದಲ್ಲಿ ತಾಂತ್ರಿಕ, ಆಯುರ್ವೇದ, ದಂತ, ಫಾರ್ಮಸಿ ವಿದ್ಯಾರ್ಥಿಗಳಿಗಾಗಿ ನಡೆದ ವ್ಯಕ್ತಿತ್ವ ವಿಕಸನ ಶಿಬಿರವನ್ನು ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂತಿವ್ರತಾನಂದಜಿರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಕಿರಣ್ ಗುಡದಿನ್ನಿ, ಡಾ. ಕೆ. ಓಂಪ್ರಕಾಶ್, ಡಾ. ಆನಂದ್ ಕುಮಾರ್ ಟೆಂಗ್ಲಿ, ಡಾ. ಬಿ.ಎಸ್. ಹರೀಶ್, ಶ್ರೀ ಜಯರಾಜೇಂದ್ರ ಸ್ವಾಮೀಜಿ, ಡಾ. ರವಿ ಹಾಗೂ ಶ್ರೀ ಹರ್ಷಾನಂದರನ್ನು ಕಾಣಬಹುದು



ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರೀಮಠದ ವತಿಯಿಂದ ವೈದ್ಯರಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರವನ್ನು ಬೆಂಗಳೂರಿನ ನಾರಾಯಣ ಹೃದಯಾಲಯದ ನರರೋಗ ತಜ್ಞರಾದ ಡಾ. ತಿಮ್ಮಪ್ಪ ಹೆಗಡೆಯವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಡಾ. ಕೆ.ಬಿ. ಚೇತಕ್, ಡಾ. ಪುರುಷೋತ್ತಮ ಶಾಸ್ತ್ರಿ ಹಾಗೂ ಡಾ. ಕೆ.ಬಿ. ಸುಮಾರವರು

# ಯುವಶಕ್ತಿ ದೇಶಸೇವೆಗೆ ಮುಡಿಪಾಗಬೇಕು

ಶ್ರೀ ಶಾಂತಿವ್ರತಾನಂದಜಿ

ಯುವಶಕ್ತಿಯ ಸಂಪನ್ಮೂಲವನ್ನು ದೇಶಸೇವೆಯಲ್ಲಿ ಮುಡಿಪಾಗಿಸಬೇಕಾಗಿದೆ ಎಂದು ಮೈಸೂರು ಶ್ರೀ ರಾಮಕೃಷ್ಣಾಶ್ರಮದ ಸ್ವಾಮಿ ಶಾಂತಿವ್ರತಾನಂದಜಿರವರು ತಿಳಿಸಿದರು. ಅವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಏಪ್ರಿಲ್ 9 ರಿಂದ 11 ರವರೆಗೆ **ತಾಂತ್ರಿಕ, ಆಯುರ್ವೇದ, ದಂತ ಮತ್ತು ಫಾರ್ಮಸಿ ವಿದ್ಯಾರ್ಥಿಗಳಿಗಾಗಿ** ಆಯೋಜಿಸಿದ್ದ **ವ್ಯಕ್ತಿತ್ವ ವಿಕಸನ ಶಿಬಿರದ** ಉದ್ಘಾಟನೆಯ ನಂತರ 'ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ' ವಿಷಯ ಕುರಿತು ಉಪನ್ಯಾಸ ನೀಡಿದರು. ಭಾರತದಂತಹ ಪುಣ್ಯಭೂಮಿಯಲ್ಲಿ ಯುವಶಕ್ತಿ ಎಂದರೆ ನೆನಪಾಗುವುದು ಸ್ವಾಮಿ ವಿವೇಕಾನಂದರು. ಈ ಯುವಚೇತನ ಹುಟ್ಟಿದ್ದು ಭಾರತ ದೇಶದಲ್ಲಿ ಎಂಬ ಹೆಮ್ಮೆ ನಮ್ಮದು. ಸುಹಾಸ್ ಗೋಪಿನಾಥ್ ಎಂಬ ಯುವಕ 17ನೇ ವಯಸ್ಸಿನಲ್ಲಿ ಜಾಲತಾಣಗಳನ್ನು ರಚಿಸುವ ಬಗೆಯನ್ನು ಸ್ವತಃ ಕಲಿತು ತಮ್ಮದೇ ಜಾಲತಾಣ ರಚಿಸಿ ಗ್ಲೋಬಲ್ ಇಂಕ್ ಎನ್ನುವ ಕಂಪನಿ ಆರಂಭಿಸಿ ಅದೇ ಕಂಪನಿಗೆ ಸಿಇಓ ಆಗಿ ಉನ್ನತಾಧಿಕಾರಕ್ಕೇರಿದರು. ಭಾರತಾಂಬೆಯ ಮಕ್ಕಳೆಲ್ಲ ಅವಳ ಸೇವೆಯಲ್ಲಿ ದೇಹ ಸವೆಸಬೇಕಿದೆ. ಭಾರತ ದೇಶವೆಂಬ ಸುಂದರ ಮನೆಯನ್ನು ಯುವಶಕ್ತಿಯೆಂಬ ಆಲೋಚನೆಯಿಂದ ಕಟ್ಟಬೇಕಿದೆ, ಆತ್ಮವಿಶ್ವಾಸವೆಂಬ ನೀರುಣಿಸಿ ಪ್ರೀತಿ, ಬಾಂಧವ್ಯದ ಸಂಬಂಧಗಳೊಂದಿಗೆ ನಾವೆಲ್ಲರೂ ಭಾರತಮಾತೆಯ ಮಕ್ಕಳೆಂದು ಸಮಬಾಳು ನಡೆಸಬೇಕಿದೆ ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ಡಿ.ಎಸ್. ಗುರುರವರು 'ಜೀವನ ಮೌಲ್ಯಗಳು' ವಿಷಯ ಕುರಿತು ಉಪನ್ಯಾಸ ನೀಡಿ, ನಿತ್ಯ ಜೀವನದ ಪಯಣದಲ್ಲಿ ಪ್ರತಿ ಕ್ಷಣವೂ ಹೊಸ ಪರಿಚಯ, ಸ್ನೇಹ, ಪರಿಚಿತರ ಬೀಳ್ಕೊಡುಗೆಯೊಂದಿಗೆ ಸಾಗುತ್ತಿರುತ್ತದೆ. ಯಾವ ಪರಿಚಯ ಹಾಗೂ ಸ್ನೇಹವು ಶಾಶ್ವತವಲ್ಲ, ಮರೆಯುವಂಥಹದ್ದೂ ಅಲ್ಲ. ಯಾರ ಪಯಣ ಎಂದು ಮುಗಿಯುತ್ತದೆ ಎಂದು ತಿಳಿಯದ ಒಂದು ಸುಂದರ ಪಯಣ ಈ ನಮ್ಮ ಜೀವನ. ಸಮಾಜಕ್ಕೆ ಉತ್ತಮ ಸೇವೆ ನೀಡುವುದು ನಮ್ಮಲ್ಲಿ ಅನುವಂಶಿಕವಾಗಿ ಬೆಳೆದು ಬಂದಿದೆ. ಇದನ್ನು ಕಾಪಾಡಿಕೊಳ್ಳುವ ಅವಶ್ಯಕತೆ ಹೆಚ್ಚಿದೆ. ಭವಿಷ್ಯದಲ್ಲಿ ಉತ್ತಮ ಬಾಂಧವ್ಯ ಕಟ್ಟುವ ಸಮಾಜ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಮುಂದಾಗಬೇಕು. ವಿವಿಧತೆಯಲ್ಲಿರುವ ಏಕತೆಯನ್ನು ಸಮಾಜಕ್ಕೆ ತೋರಿಸಬೇಕಿದೆ. ಹಿರಿಯರನ್ನು ಮತ್ತು ಗುರುಗಳನ್ನು ಪೂಜ್ಯಭಾವದಿಂದ ಕಾಣಬೇಕು. ಜ್ಞಾನಿಗಳ ಬಗ್ಗೆ ಪೂಜ್ಯಭಾವ ಹೊಂದುವಂತಹ ಗುಣ ಮತ್ತು ನಿಸ್ವಾರ್ಥ ಪ್ರೀತಿಯಿಂದ ಶಿಕ್ಷಣ ನೀಡುವವರಿಗೆ ಗೌರವ ನೀಡಲು ಕಲಿಯುವುದು ಬಹಳ ಮುಖ್ಯ. ಗುರು ಅಥವಾ ಆಧ್ಯಾತ್ಮವನ್ನು ಹೇಳಿಕೊಡುವವರು ಉತ್ಕೃಷ್ಟವಾದ ಆಧ್ಯಾತ್ಮಿಕ ಜ್ಞಾನವುಳ್ಳವರಾಗಿದ್ದು ದೇವನಿಗೆ ಸಮಾನವಾಗಿ ಪರಿಗಣಿಸಲ್ಪಡುತ್ತಾರೆ ಎಂದು ನುಡಿದರು.

ಶ್ರೀ ಆರ್.ಎ. ಚೇತನ್‌ರಾಮ್‌ರವರು 'ನಾಯಕತ್ವದ ಗುಣಗಳು' ವಿಷಯ ಕುರಿತು ಉಪನ್ಯಾಸ ನೀಡಿ ಅತ್ಯುತ್ತಮ ಅನುಯಾಯಿಯು ಮಾತ್ರ ಅತ್ಯುತ್ತಮ ನಾಯಕನಾಗಲು ಸಾಧ್ಯ. ಆತ್ಮವಿಶ್ವಾಸವು ಆಂತರಂಗಿಕವಾದ ನಂಬಿಕೆಯಾಗಿದೆ. ಎಲ್ಲಕ್ಕಿಂತ ದೊಡ್ಡ ನಂಬಿಕೆ ಎಂದರೆ ನಮ್ಮನ್ನು ನಾವು ನಂಬುವುದು. ನಮ್ಮ ನಡವಳಿಕೆಗಳು,

ನಮ್ಮ ಆಲೋಚನೆಗಳು, ನಮ್ಮ ಜೊತೆಗಾರರು ಈ ಎಲ್ಲಾ ಅಂಶಗಳು ನಮ್ಮ ಬಗ್ಗೆ ನಮಗೆ ನಂಬಿಕೆಯನ್ನು ಹುಟ್ಟಿಸುತ್ತವೆ. ನಮ್ಮ ಸಣ್ಣ ಸಣ್ಣ ಯಶಸ್ಸುಗಳನ್ನು ಅರ್ಥಮಾಡಿಕೊಂಡರೆ ನಾವು ಏನೂ ಮಾಡಲಾರೆವು ಎಂಬ ಕೀಳರಿಮೆಯು ಹೊರಟುಹೋಗುತ್ತದೆ. ಆಗ ಆತ್ಮವಿಶ್ವಾಸವು ಮೂಡುತ್ತದೆ. ಆತ್ಮವಿಶ್ವಾಸವು ನಾಯಕತ್ವದ ಮೂಲಭೂತ ಅಗತ್ಯವಾಗಿದೆ. ದೂರದೃಷ್ಟಿಯ ಚಿಂತನೆಯು ನಾಯಕತ್ವಕ್ಕೆ ಇರಬೇಕಾದ ಅತ್ಯಂತ ಪ್ರಮುಖ ಲಕ್ಷಣವಾಗಿದೆ. ಒಂದು ವಿಚಾರದ ಬಗ್ಗೆ ಯೋಚಿಸುವ, ಚಿಂತಿಸುವ, ದೂರಗಾಮಿ ಪರಿಣಾಮಗಳನ್ನು ಅರ್ಥೈಸುವ ಸಾಮರ್ಥ್ಯವನ್ನು ಹೊಂದಿರಬೇಕು ಎಂದು ಹಲವಾರು ನಿದರ್ಶನಗಳನ್ನು ನೀಡುವ ಮೂಲಕ ಹಾಸ್ಯಭರಿತವಾಗಿ, ಲವಲವಿಕೆಯಿಂದ ವ್ಯಕ್ತಿತ್ವ ವಿಕಸನದ ವಿಚಾರಗಳನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು.

---

## ನಗುಮುಖದ ದರ್ಶನವೆ ಸ್ವರ್ಗ

**ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು**

ಭಕ್ತನಿರುವ ತಾಣವೆ ದೇವಲೋಕ, ಭಕ್ತನ ಅಂಗಳವೆ ಮಹಾಕಾಶಿ, ಭಕ್ತನ ಕಾಯವೆ ಕೈಲಾಸ, ನಗು ಮುಖದ ದರ್ಶನವೆ ಸ್ವರ್ಗ. ನಾವೆಲ್ಲ ಈ ಸುಂದರ ಜಗತ್ತಿನ ಯಾತ್ರಿಕರು. ಯಾತ್ರೆ ಮಾಡುವಾಗ ಅಲ್ಲಲ್ಲಿ ಸುಂದರವಾದ ನೋಟಗಳು, ಫಲಭರಿತ ತೋಟಗಳು ಸಿಗುತ್ತವೆ. ಅವುಗಳನ್ನು ನೋಡುತ್ತ, ಅನುಭವಿಸುತ್ತ ಮುಂದೆ ಸಾಗಬೇಕು. ಜೀವನವನ್ನು ಪ್ರೀತಿಸುತ್ತಾ, ಅನುಭವಿಸುತ್ತಾ ಸಾಗಿದಾಗ ಮಾತ್ರ ಬದುಕು ದಿವ್ಯವಾಗುತ್ತದೆ. ಭೂಮಿ, ಮಳೆ, ನೀರು ಮತ್ತು ಆಹಾರವನ್ನು ಆ ಭಗವಂತ ನಮಗೆ ನೀಡಿದ್ದಾನೆ. ಪ್ರಕೃತಿಯಿಂದ ಪ್ರತಿಯೊಂದು ಸೌಲಭ್ಯವನ್ನು ಪಡೆದ ನಾವು ಭಾಗ್ಯವಂತರು ಎಂದು ಅರಿತು ಪ್ರತಿ ಕ್ಷಣದಲ್ಲೂ ಸಂತೋಷದ ಜೀವನ ನಡೆಸುವುದನ್ನು ಕಲಿಯಬೇಕು. ದೇವಲೋಕ, ಮರ್ತ್ಯಲೋಕ, ಸ್ವರ್ಗ-ನರಕ ಎಲ್ಲವೂ ಇಲ್ಲೇ ಇವೆ. ಇದು ಅನಂತ ಲೋಕಗಳ ಜಗತ್ತು ಎಂದು ವಿಜಯಪುರದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಏಪ್ರಿಲ್ 9 ರಿಂದ 11 ರವರೆಗೆ ತಾಂತ್ರಿಕ, ಆಯುರ್ವೇದ, ದಂತ ಮತ್ತು ಫಾರ್ಮಸಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ಪ್ರವಚನ ನೀಡಿದರು.




ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಪ್ರವಚನ ನೀಡುತ್ತಿರುವುದು

ಶ್ರೀ ಹರೀಶ್ ಕೊಡೆಂದರರವರು ನಿರ್ವಹಣೆಯು ಕಲೆ ಮತ್ತು ವಿಜ್ಞಾನ ಎರಡೂ ಆಗಿದೆ. ನಿರ್ವಾಹಕನು ವಿಜ್ಞಾನ ಹಾಗೂ ಅದನ್ನು ಅನ್ವಯಿಸುವ ಕಲೆಯ ಜ್ಞಾನ ಪಡೆಯಬೇಕು. ಆಗ ಅವನು ತನ್ನ ವೃತ್ತಿಯಲ್ಲಿ ಯಶಸ್ಸನ್ನು ಕಾಣುತ್ತಾನೆ. ಪ್ರತಿ ಕಲೆಯು ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಅಂಶಗಳನ್ನೊಳಗೊಂಡಿದೆ ಎಂದು ತಿಳಿಸಿದರು.

ಪ್ರೊ. ಎಂ. ಕೃಷ್ಣೇಗೌಡರವರು ಸಂವಹನಕ್ಕಾಗಿ ಮಾತನ್ನು ಬಳಸಿಕೊಳ್ಳುವ ಮಾಧ್ಯಮಗಳು ಹಲವು, ಇವುಗಳನ್ನು ಸ್ಥೂಲವಾಗಿ ಶ್ರವ್ಯ ಮತ್ತು ದೃಶ್ಯ ಮಾಧ್ಯಮ ಎಂದು ವಿಂಗಡಿಸಿದೆ. ಈ ಎರಡು ಸಾಧ್ಯತೆಗಳನ್ನು ವೈವಿಧ್ಯಮಯವಾಗಿ ಬಳಸಿಕೊಂಡು ಕಥಾಕಾಲಕ್ಷೇಪ, ರಂಗನಾಟಕ, ರೇಡಿಯೋ, ದೂರದರ್ಶನ ಮತ್ತು ಇತ್ತೀಚಿನ ನವೀನ ಮಾಧ್ಯಮಗಳ ಹತ್ತು ಹಲವು ಸಂವಹನ ಪ್ರಕಾರಗಳು ಮೂಡಿಬಂದಿವೆ. ಒಬ್ಬ ಉತ್ತಮ ಮಾತುಗಾರನಾಗಬೇಕಾದರೆ ಮೊದಲು ಒಬ್ಬ ಸಕ್ರಿಯವಾಗಿ ಆಲಿಸುವವನಾಗಿರಬೇಕು ಎಂದು ತಿಳಿಸಿದರು.

---

## ಸಕಾರಾತ್ಮಕ ಚಿಂತನೆ ಉತ್ತಮ ನಾಯಕತ್ವದ ಲಕ್ಷಣ

**ಡಾ. ಸಿ.ಜಿ. ಬೆಟಸೂರಮಠ**

ನಾವು ಕೈಗೊಳ್ಳುವ ಯಾವುದೇ ಕಾರ್ಯದಲ್ಲಿ ಅನಿರೀಕ್ಷಿತ ಅಡೆತಡೆಗಳು ಬರುವುದು ಸಹಜ. ಅವು ನಮ್ಮನ್ನು ಕಂಗಾಲು ಮಾಡುತ್ತವೆ. ಬಹಳಷ್ಟು ಜನ ಭಯದಿಂದ, ನಿರಾಸೆಯಿಂದ ಕುಸಿಯುತ್ತಾರೆ. ಆದರೆ ನಿಜವಾದ ನಾಯಕತ್ವದ ಗುಣ ಇರುವವರು ಈ ಸಂಕಷ್ಟದ ಸ್ಥಿತಿಯಲ್ಲಿಯೇ ಸಕಾರಾತ್ಮಕ ಚಿಂತನೆ ಮಾಡುವ ಮೂಲಕ ಅತ್ಯುತ್ತಮವಾದ ಪರಿಹಾರವನ್ನು ಕಂಡುಕೊಳ್ಳುತ್ತಾರೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಸುತ್ತೂರು ಶ್ರೀಕ್ಷೇತ್ರದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ತಿಳಿಸಿದರು. ಅನುಪಮವಾದ ನಾಯಕತ್ವ ಶೈಲಿಯನ್ನು ಬೆಳೆಸಿಕೊಳ್ಳುವುದು, ಸೃಜನಶೀಲತೆಯನ್ನು ಪ್ರೋತ್ಸಾಹಿಸುವುದು, ಅನುಯಾಯಿಗಳ ಸದ್ಗುಣಗಳನ್ನು ನೋಡಿ ಕಲಿಯುವುದು, ಪ್ರತಿಯೊಬ್ಬರೂ ಅವರಷ್ಟಕ್ಕೇ ಕೆಲಸ ಮಾಡಲು ಅವಕಾಶ ನೀಡುವುದು, ಸಹೋದ್ಯೋಗಿಗಳ ವೈಯಕ್ತಿಕ ಸಮಸ್ಯೆಗಳ ಕುರಿತು ಕಾಳಜಿ ವಹಿಸುವುದು, ಒಳ್ಳೆಯ ಕೆಲಸವನ್ನು ಮುಕ್ತಕಂಠದಿಂದ ಶ್ಲಾಘಿಸುವುದು ಉತ್ತಮ ನಾಯಕತ್ವದ ಲಕ್ಷಣಗಳು ಎಂದರು.



ಡಾ. ಸಿ.ಜಿ. ಬೆಟಸೂರಮಠರವರು ನಾಯಕತ್ವದ ಲಕ್ಷಣಗಳನ್ನು ಕುರಿತು ಉಪನ್ಯಾಸ ನೀಡುತ್ತಿರುವುದು

ನಮ್ಮ ಊಹೆಗೂ ಮೀರಿ ಮನಸ್ಸಿನ ವೇಗಕ್ಕಿಂತಲೂ ಹೆಚ್ಚಿನ ವೇಗದಲ್ಲಿ ಮಾಹಿತಿ ಮತ್ತು ತಂತ್ರಜ್ಞಾನವು ಬೆಳೆಯುತ್ತಿರುವ 21ನೇ ಶತಮಾನದಲ್ಲಿ ವೈದ್ಯರು ರೂಢಿಸಿಕೊಳ್ಳಬೇಕಾದ ನಾಯಕತ್ವದ ಗುಣ ಹಾಗೂ ಕೌಶಲ್ಯಗಳ ಬಗ್ಗೆ ವಿವರಿಸಿದರು.

ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ವೈದ್ಯರಾದ ಡಾ. ಎಂ.ಎಸ್. ವಿಶ್ವೇಶ್ವರರವರು ದಿನನಿತ್ಯದ ವೈಯಕ್ತಿಕ ವೃತ್ತಿ ಬದುಕಿನಲ್ಲಿ ವ್ಯವಹರಿಸುವಾಗ ಇತರರನ್ನು ಪ್ರೇರೇಪಿಸುವ, ಮನವೊಪ್ಪಿಸುವ ಅಥವಾ ಒತ್ತಾಯಿಸುವ

ಸಂದರ್ಭಗಳು ಸಹಜ. ಇಂತಹ ಸಂದರ್ಭಗಳಲ್ಲಿ ಸಂವಹನ ಅತ್ಯಂತ ಪರಿಣಾಮಕಾರಿಯಾಗಿದ್ದು, ಉದ್ದೇಶವನ್ನು ಸಾಧಿಸುವಂತಿರಬೇಕು. ಮಾತಿನ ಕೌಶಲ್ಯಕ್ಕೆ ಎಲ್ಲರನ್ನೂ ಸೆಳೆಯುವಂತಹ ಹಾಗೂ ಸಮಸ್ಯೆ ಇತ್ಯರ್ಥ ಮಾಡುವಂತಹ ಶಕ್ತಿ ಇದೆ. ಕೆಲಸದ ಜೊತೆಗೆ ಮಾತಿನ ಕಲೆಯೂ ಗೊತ್ತಿರಬೇಕು. ಉತ್ತಮ ಸಂವಹನ ವೃತ್ತಿಯ ಯಶಸ್ಸಿಗೆ ಸಹಾಯವಾಗುವುದು ಎಂದು ತಿಳಿಸಿದರು.

ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಯ ಮನೋವೈದ್ಯರಾದ ಡಾ. ಎಚ್.ಎನ್. ಶಶಿಧರ್‌ರವರು "ಮಾನಸಿಕ ಒತ್ತಡ ನಿರ್ವಹಣೆಗೆ ಹಲವು ಉಪಾಯಗಳಿವೆ. ಅವುಗಳಲ್ಲಿ ವ್ಯಾಯಾಮ, ಸಾತ್ವಿಕ ಆಹಾರ, ಜೀವನಶೈಲಿ, ಆಹಾರ ಪದ್ಧತಿಯ ಬದಲಾವಣೆ, ಮನಸ್ಸನ್ನು ಆದಷ್ಟು ಶಾಂತ ಹಾಗೂ ಸಮಾಧಾನವಾಗಿ ಇಟ್ಟುಕೊಳ್ಳುವುದು, ಸಕಾರಾತ್ಮಕ ಭಾವನೆ ಬೆಳೆಸಿಕೊಳ್ಳುವುದು ಅಗತ್ಯ. ಮಧುಮೇಹ, ರಕ್ತದೊತ್ತಡ ನಿವಾರಣೆಗೆ ಸೂಕ್ತ ಕ್ರಮ ಕೈಗೊಳ್ಳುವುದು ಬಹಳ ಮುಖ್ಯ ಎಂದು ತಿಳಿಸಿದರು.

---

## ಸಾವು ಶರೀರಕ್ಕೆ, ಆತ್ಮಕ್ಕೆ ಅಲ್ಲ

**ಡಾ. ತಿಮ್ಮಪ್ಪ ಹೆಗಡೆ**

'ಸಾವು ಶರೀರಕ್ಕೆ, ಆತ್ಮಕ್ಕೆ ಅಲ್ಲ' ಎಂದು ಬೆಂಗಳೂರಿನ ನಾರಾಯಣ ಹೃದಯಾಲಯದ ನರರೋಗ ತಜ್ಞರಾದ ಡಾ. ತಿಮ್ಮಪ್ಪ ಹೆಗಡೆಯವರು ಸುತ್ತೂರು ಶ್ರೀಕ್ಷೇತ್ರದಲ್ಲಿ ವೈದ್ಯರಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದ ಉದ್ಘಾಟನೆಯ ನಂತರ ಮಾತನಾಡುತ್ತಾ ತಿಳಿಸಿದರು. "ಪ್ರತಿಯೊಂದು ಆಚರಣೆಯ ಹಿಂದೆ ಜೀವನದ ಮೌಲ್ಯ ಅಡಗಿದೆ. ಬದುಕೇ ಒಂದು ಹಬ್ಬ. ತಮ್ಮ ಜೀವನಕ್ಕೆ ಆಶ್ರಯವಾಗಿರುವ ಪ್ರತಿಯೊಂದು ವಸ್ತುವನ್ನೂ ಪೂಜಿಸುವ ಮನಸ್ಸು ಅದರಲ್ಲಿದೆ. ಆತ್ಮ ಎಂಬುದು ಅವಿನಾಶಿಯಾದುದು, ಸತ್ಯವನ್ನು ಅರಿತರೆ ನಾವು ಸತ್ತ ಮೇಲೆಯೂ ಆತ್ಮದೊಂದಿಗೆ ಅಮರರಾಗಿರುತ್ತೇವೆ. ಸಾವು ಎಂಬುದು ಮನುಷ್ಯನಿಗೆ ದೊರೆತ ಅಪರೂಪದ ಅವಕಾಶ. ಕಷ್ಟಸುಖಗಳು ಬಂದುಹೋಗುವಂತಹವುಗಳು, ಅವು ಯಾವುವೂ ಶಾಶ್ವತವಲ್ಲ. ಸಾವನ್ನು ಸಂತಸದಿಂದ ಸ್ವೀಕರಿಸಬೇಕು. ಇರುವಷ್ಟು ದಿನ ಪ್ರತಿ ಕ್ಷಣವನ್ನು ದುಃಖವಾಗಲೀ ಖುಷಿಯಾಗಲೀ ಯಾವುದಾದರೂ ಸರಿ ಅನುಭವಿಸುತ್ತಾ, ಅನುಸರಿಸುತ್ತಾ, ಜವಾಬ್ದಾರಿಗಳನ್ನು ನಿಭಾಯಿಸುತ್ತಾ ಅಂದುಕೊಂಡ ಗುರಿಯನ್ನು ಮುಟ್ಟುವುದೇ ನಿಜವಾದ ಜೀವನ ಎಂದು ತಿಳಿಸಿದರು.

ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು "ವಿಶ್ವವನ್ನು ಅರ್ಥಮಾಡಿಕೊಂಡವರು ಅನುಭಾವಿಗಳು, ಅವರೇ ವಿಜ್ಞಾನಿಗಳು, ಅಂಥವರನ್ನು ಅಳತೆ ಮಾಡಲಾಗದು. ಶಾಂತವಾಗಿ ಅಂತರ್ಯದಲ್ಲಿರುವ ವಸ್ತುವೇ ಶಿವ. ಶಿವ ಶಾಂತ, ಶಿವ ನಿರಾಕಾರ. ವ್ಯಾಪಕವೇ ವಿಷ್ಣು, ವಿಸ್ತಾರವೇ ಬ್ರಹ್ಮ ಇದೇ ಸತ್ಯದ ಲಕ್ಷಣ, ಇದೇ ಆತ್ಮದ ಲಕ್ಷಣ, ಇದೇ ಜ್ಞಾನ, ಇದೇ ಸಾಧನೆ. ದೇವರು ನಿರ್ಮಿಸಿರುವ ಈ ಸುಂದರ ಸಾಮ್ರಾಜ್ಯದಲ್ಲಿ ನಾವು ಏನಾದರೂ ಸಾಧಿಸಬೇಕು. ಜಗತ್ತನ್ನು ಪ್ರೀತಿಸಬೇಕು. ಭೂಮಿ ಮೇಲಿರುವ ಗಾಳಿ, ಬೆಳಕು, ನೀರು ಇವುಗಳಲ್ಲಿ ಯಾವುದಾದರೂ ಒಂದು ಇಲ್ಲವೆಂದರೆ ಈ ಜಗತ್ತಿನಲ್ಲಿ ಯಾರೂ ಕೂಡ ಬದುಕಲು ಸಾಧ್ಯವಿಲ್ಲ. ಇಂತಹ ಸುಂದರ ಜಗತ್ತಿಗೆ ನಾವು ಧನ್ಯವಾದ ಅರ್ಪಿಸಬೇಕು ಎಂದು ತಿಳಿಸಿದರು.

ಬೆಂಗಳೂರಿನ ವಿಭಾ ಅಕಾಡೆಮಿಯ ಡಾ. ವಿ.ಬಿ. ಆರತಿಯವರು ಭಾರತ–ಒಂದು ಜೀವಂತ ಸಂಸ್ಕೃತಿ. ಭಾರತ ಎಂದ ಕೂಡಲೇ ದೇಶ–ವಿದೇಶಿಯರ ಮನದಲ್ಲಿ ಮೂಡುವುದು ಇಂದಿಗೂ ಆಚರಿಸಿಕೊಂಡು ಬರುತ್ತಿರುವ ಸಂಪ್ರದಾಯ, ಸಂಸ್ಕೃತಿ, ಬಣ್ಣ–ಬಣ್ಣದ ಹಬ್ಬಗಳು, ಮನಸೆಳೆಯುವ ಮೆರವಣಿಗೆ ಇತ್ಯಾದಿ. ಪ್ರತಿ ಕಿಲೋಮೀಟರ್‌ಗೆ ಬದಲಾಗುವ ಭಾಷೆ ಮತ್ತು ವೈವಿಧ್ಯತೆ ಅವರನ್ನು ಬೆಚ್ಚಬೆರಗಾಗಿಸುತ್ತವೆ. ಸಾವಿರಾರು ವರ್ಷಗಳಿಂದ ಭಾರತಾದ್ಯಂತ ಸಾವಿರಾರು ಸಂಸ್ಕೃತಿ, ಲಿಪಿ ಇರುವ ಭಾಷೆ, ಲಿಪಿ ಇಲ್ಲದ ಭಾಷೆ, ಜಾತಿ–ಉಪಜಾತಿಗಳ ಸಮನ್ವಯದಲ್ಲಿ ಜನರು ಸಹಬಾಳ್ವೆ ನಡೆಸುತ್ತಾ ಬಂದಿದ್ದಾರೆ. ಇಷ್ಟೊಂದು ವೈವಿಧ್ಯತೆ, ಭಿನ್ನತೆ ಇದ್ದರೂ ವಿಶ್ವಮಟ್ಟದಲ್ಲಿ ಭಾರತ ಹಲವು ವಿಷಯಗಳಲ್ಲಿ ಅಗ್ರಸ್ಥಾನದಲ್ಲಿಯೇ ಇದೆ ಎಂದು ತಿಳಿಸಿದರು.

---

## ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಮಾದರಿ

**ಡಾ. ಶರ್ಮಾ ವಿ.ಎಸ್.ಎನ್. ರಾಚಕೊಂಡ**

ವಸುಧೈವ ಕುಟುಂಬಕಂ' ಎಂಬಂತೆ ಜಗತ್ತಿನ ಎಲ್ಲಾ ಜೀವಿಗಳನ್ನು ತಮ್ಮಂತೆ ಭಾವಿಸುವ ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಮಾದರಿಯಾಗಿದೆ ಎಂದು ಆಂಧ್ರಪ್ರದೇಶದ ಶ್ರೀಕಾಕುಳಂನ ರಿಮ್ಸ್‌ನ ಪ್ರೊ. ಡಾ. ಶರ್ಮಾ ವಿ.ಎಸ್.ಎನ್. ರಾಚಕೊಂಡರವರು ಹೇಳಿದರು. ಸುತ್ತೂರು ಶ್ರೀಕ್ಷೇತ್ರದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಪ್ರಾಚೀನ ಇತಿಹಾಸ, ಅನನ್ಯ ಭೌಗೋಳಿಕ ರಚನೆ, ವೈವಿಧ್ಯಮಯ ಜನಸಮುದಾಯ, ವಿಭಿನ್ನ ಸಂಪ್ರದಾಯ ಮತ್ತು ಆಚರಣೆಗಳು, ಪ್ರಾಚೀನ ಪರಂಪರೆ ಹಾಗೂ ನೆರೆಹೊರೆ ರಾಷ್ಟ್ರಗಳ ಪ್ರಭಾವಗಳು ಭಾರತೀಯ ಸಂಸ್ಕೃತಿಯನ್ನು ರೂಪಿಸಿವೆ. ಹಿಂದೂ, ಬೌದ್ಧ, ಜೈನ ಹಾಗೂ ಸಿಖ್ ಧರ್ಮಗಳಿಗೆ ಭಾರತ ಜನ್ಮಭೂಮಿ. ಧರ್ಮನಿಷ್ಠ ಸಮುದಾಯಗಳು ಮತ್ತು ಸಂಸ್ಕೃತಿಯನ್ನು ಹೊಂದಿರುವ ಭಾರತ ವಿಶ್ವದಲ್ಲೇ ಅತ್ಯಂತ ಧಾರ್ಮಿಕ ವೈವಿಧ್ಯತೆಯುಳ್ಳ ರಾಷ್ಟ್ರ. ಪರರನ್ನು ತನ್ನಂತೆಯೆ ಗೌರವಿಸುವ ಸಂಸ್ಕೃತಿ ಭಾರತೀಯರದ್ದಾಗಿದೆ. ಸಂಸ್ಕಾರ ಮತ್ತು ಸಂಸ್ಕೃತಿಯಲ್ಲಿ ಭಾರತ ಪ್ರಪಂಚಕ್ಕೆ ಮಾದರಿಯಾಗಿದೆ ಎಂದರು.

ಮೈಸೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಆರ್. ದಾಕ್ಷಾಯಿಣಿಯವರು ಸಂಬಂಧಗಳ ಸಾಮಾಜಿಕ ಅಭ್ಯುದಯವನ್ನು ಕಾಣುತ್ತಾ ಬಂದಿರುವ ಮನುಕುಲ ಇಂದು ತಂತ್ರಜ್ಞಾನ ಆವಿಷ್ಕಾರಗಳಿಗೆ ಬಲಿಯಾಗಿ ತನ್ನ ಮೂಲ ಮಾನವೀಯ ನೆಲೆಯನ್ನು ಕಳೆದುಕೊಳ್ಳುತ್ತಿರುವುದು ದುರಂತ. ಹೃದಯಸ್ಪರ್ಶಿ ಮಾತು, ಬೌದ್ಧಿಕ ಚರ್ಚೆ, ಸಂವೇದನಶೀಲ ಸಂವಾದ, ಪರಸ್ಪರ ಭೇಟಿ ಮತ್ತು ಮಾನವೀಯ ಅಂತಃಕರಣಗಳು ಗೌಣವಾಗುತ್ತಿವೆ. ಸ್ನೇಹ ಸಂಬಂಧದ ಬಾಂಧವ್ಯ ಮತ್ತು ಆಪ್ತತೆಗಳೆಲ್ಲವೂ ಸಾಮಾಜಿಕ ಜಾಲತಾಣಗಳಲ್ಲಿ ಅಡಗಿವೆ. ಮುಖಪರಿಚಯವೇ ಇಲ್ಲದ, ನೂರಾರು ಮೈಲಿ ದೂರದಲ್ಲಿರುವವರನ್ನು ಇದರ ಮೂಲಕ ಸ್ನೇಹಿತರೆಂದು ಗುರುತಿಸುವ, ಅವರೊಡನೆ ದಿನಗಟ್ಟಲೆ ಹರಟುವ ಯುವಜನಾಂಗ ತನ್ನ ಬದಿಯಲ್ಲೇ ಇರುವ ಬಂಧುಬಾಂಧವರನ್ನು, ಸ್ನೇಹಿತರನ್ನು ಗುರುತಿಸಲು ಅಶಕ್ತವಾಗಿದೆ, ಭಾವನೆಯ ಸೆಲೆಗಳು ಬತ್ತಿಹೋಗುತ್ತಿವೆ, ಸಂವೇದನೆಯ ನೆಲೆಗಳು ನಾಶವಾಗುತ್ತಿವೆ. ಈ ವಿಷವರ್ತುಲದಿಂದ ಹೊರಬರುವ ಮೂಲಕ ಮನುಜ ಸಂಬಂಧಗಳನ್ನು ಬೆಸೆಯುವ ಪ್ರಯತ್ನಗಳು ನಡೆಯಬೇಕಿದೆ ಎಂದು ವಿವರಿಸಿದರು.

# ಶಿಕ್ಷಕ ಸುಂದರ ಸಮಾಜದ ಮಾಲೀಕ

**ಶ್ರೀ ಕೆ. ಜಯಪ್ರಕಾಶ್‌ರಾವ್**

ಶಿಕ್ಷಕನಿಲ್ಲದ ಶಿಕ್ಷಣವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ಸುಂದರ ಸಮಾಜದ ನಿರ್ಮಾತೃಗಳನ್ನು ಸೃಷ್ಟಿಸುವ ತೋಟದ ಮಾಲೀಕರೇ ಶಿಕ್ಷಕರು ಎಂದು ಮೈಸೂರಿನ ಅಖಿಲ ಭಾರತ ಸಾರ್ವಜನಿಕ ಸಂಪರ್ಕ ಮಹಾಮಂಡಳಿ ದಕ್ಷಿಣ ಭಾರತದ ಪ್ರಾಂತೀಯ ಅಧ್ಯಕ್ಷರಾದ ಶ್ರೀ ಕೆ. ಜಯಪ್ರಕಾಶ್‌ರಾವ್‌ರವರು ಅಭಿಪ್ರಾಯಪಟ್ಟರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿಕ್ಷಕರಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಪ್ರತಿಯೊಬ್ಬ ಸಾಧಕರ ಹಿಂದೆಯೂ ಶಿಕ್ಷಕರ ಶ್ರಮ ಇದ್ದೇ ಇರುತ್ತದೆ. ಮಕ್ಕಳ ಲಾಲನೆ–ಪಾಲನೆಯಲ್ಲಿ ತಾಯಿಯ ಪಾತ್ರ ಎಷ್ಟು ಮುಖ್ಯವೋ, ಅಂತೆಯೇ ಮಕ್ಕಳ ಬೌದ್ಧಿಕ ಜ್ಞಾನವನ್ನು ವೃದ್ಧಿಸುವಲ್ಲಿ ಶಿಕ್ಷಕನ ಪಾತ್ರವೂ ಅಷ್ಟೇ ಮುಖ್ಯ. ಶಿಕ್ಷಕರು ಕಲಿಸುವಿಕೆಗೆ ಮಿತಿ ಹಾಕಿಕೊಂಡರೆ ಯಾವುದೇ ವ್ಯಕ್ತಿಯು ಪರಿಪೂರ್ಣ ಜ್ಞಾನವನ್ನು ಪಡೆಯಲು ಅಸಾಧ್ಯ. ನಮ್ಮ ಎಷ್ಟೋ ರಾಷ್ಟ್ರನಾಯಕರು ತಮ್ಮ ಕೆಲಸದಲ್ಲಿ ಬಿಡುವು ಮಾಡಿಕೊಂಡು ಮಕ್ಕಳಿಗೆ ಪಾಠ ಮಾಡುವುದರಲ್ಲಿ ಇರುವ ಸವಿಯನ್ನು ಅನುಭವಿಸಿದ್ದಾರೆ. ಅಂತಹವರಲ್ಲಿ ಡಾ. ಎ.ಪಿ.ಜೆ ಅಬ್ದುಲ್ ಕಲಾಂ




ಶಿಕ್ಷಕರಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರವನ್ನು ಶ್ರೀ ಕೆ. ಜಯಪ್ರಕಾಶ್‌ರಾವ್ ಮತ್ತು ಪ್ರೊ. ಎಚ್.ಎಸ್. ಉಮೇಶ್‌ರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಅಂಜುಂ ಪಾಷಾ, ಶ್ರೀ ಮ.ಗು.ಬಸವಣ್ಣ, ಶ್ರೀ ಎಚ್.ಎಸ್.ನಾಗರಾಜು, ಶ್ರೀಮತಿ ಬಿ. ಲತಾ, ಶ್ರೀಮತಿ ಸೌಜನ್ಯ ಹಾಗೂ ಶ್ರೀ ಎಂ. ಸಿ. ದೇವರಾಜುರವರು ಇದ್ದಾರೆ.

ಒಬ್ಬರು. ಇಂತಹ ಮಹಾನ್ ನಾಯಕರ ಗುಣಗಳನ್ನು ಮಕ್ಕಳಲ್ಲಿ ಬೆಳೆಸಲು ಶಿಕ್ಷಕರು ಕ್ರಿಯಾಶೀಲರಾಗಬೇಕು ಎಂದು ನುಡಿದರು.

ನಿವೃತ್ತ ಪ್ರಾಂಶುಪಾಲರಾದ ಪ್ರೊ. ಎಚ್.ಎಸ್. ಉಮೇಶ್‌ರವರು ಸೃಜನಶೀಲತೆಯು ಕಲಿತು ಬಳಸುವುದಲ್ಲ. ಪ್ರತಿಯೊಂದು ವಿಷಯದ ಪಠ್ಯಕ್ರಮವೂ ಅಪಾರ ಜ್ಞಾನವನ್ನು ನೀಡಬಯಸುತ್ತದೆ. ಶಿಕ್ಷಕರಾದವರು ಬೇಕು–ಬೇಡಗಳ ನಡುವೆ ಯಾವ ವಿಷಯಕ್ಕೆ ಎಷ್ಟು ಒತ್ತು ನೀಡಬೇಕು, ಯಾವುದು ಸೂಕ್ತ ಮತ್ತು ಆವಶ್ಯಕ ಎಂಬುದರ ಅರಿವಿನಿಂದ ತರಗತಿಯಲ್ಲಿನ ಸೃಜನಶೀಲ ಚಟುವಟಿಕೆಗಳಿಂದ ಉತ್ತಮ ಬೋಧನೆ ಮಾಡಬಹುದು. ಶಿಕ್ಷಕರಿಂದ ಈ ರೀತಿಯ ಸೃಜನಶೀಲ ಯೋಚನೆ, ಚಟುವಟಿಕೆ ಮತ್ತು ಬೋಧನೆ ವಿದ್ಯಾರ್ಥಿಗಳಿಗೆ ವರವಾಗಿ ತಮ್ಮ ಶಕ್ತಿ

ಸಾಮರ್ಥ್ಯಗಳ ಬಗ್ಗೆ ಅರಿವು ಮೂಡಿಸುತ್ತದೆ. ಅವರು ಶಾಲಾ ಶಿಕ್ಷಣ ಪೂರೈಸಿ ಉನ್ನತ ವ್ಯಾಸಂಗಕ್ಕೆ ಹೋದಾಗ ಅಥವಾ ಕೆಲಸಕ್ಕೆ ಸೇರಿದಾಗ ಅವರ ದೈನಂದಿನ ಕಾರ್ಯದಲ್ಲಿಯೂ ನೆರವಾಗುತ್ತದೆ. ಈ ನಿಟ್ಟಿನಲ್ಲಿ ವಿಷಯಜ್ಞಾನವು ಸೃಜನಾತ್ಮಕವಾಗಿ ಮೂಡಿಬಂದಾಗ ಹೊಸ ಮಾರ್ಗಗಳನ್ನು ಕಂಡುಕೊಳ್ಳಲು ಸಾಧ್ಯ ಎಂದು ತಿಳಿಸಿದರು.

ಸಾಹಿತಿಗಳಾದ ಡಾ. ಜಿ. ಕೃಷ್ಣಪ್ಪನವರು ಸಮಾಜದಲ್ಲಿ ಅರಿವು ಎಂಬ ಜ್ಞಾನ ಇದ್ದರೆ ಶಾಂತಿ, ಸಹಬಾಳ್ವೆ ಹಾಗೂ ಆದರ್ಶ ಸಮಾಜ ನಿರ್ಮಿಸಲು ಸಾಧ್ಯ. ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಸಂಸ್ಕಾರವನ್ನು ಮಕ್ಕಳಲ್ಲಿ ಬಿತ್ತಿದಾಗ ಮಾತ್ರ ದೇಶದ ಭವಿಷ್ಯ ಆಶಾದಾಯಕವಾಗಿರುತ್ತದೆ. ಆದ್ದರಿಂದ ಮಕ್ಕಳನ್ನು ಜ್ಞಾನದ ಕಣಜವಾಗಿ ಬೆಳೆಸಬೇಕು. ಸಾಹಿತ್ಯ ಅಧ್ಯಯನ ಮತ್ತು ಅರಿವಿನಿಂದ ಜೀವನ ಮೌಲ್ಯಗಳು ವೃದ್ಧಿಸುತ್ತವೆ. ಸಾಹಿತ್ಯ ಮನುಷ್ಯನನ್ನು ಸರಿದಾರಿಗೆ ಕೊಂಡೊಯ್ಯಬಲ್ಲುದು. ವಿಜ್ಞಾನದ ಬುದ್ಧಿ, ತತ್ವಜ್ಞಾನಿಯ ಮನಸ್ಸು ಮತ್ತು ಕವಿಯ ಹೃದಯ ಇದ್ದರೆ ಮನುಷ್ಯ ಶ್ರೇಷ್ಠನಾಗುತ್ತಾನೆ. ವಿಜ್ಞಾನ ಬದುಕಿಗೆ ಬೆಳಕು ನೀಡುತ್ತದೆ, ಆದರೆ ಸಾಹಿತ್ಯ ಮೌಲ್ಯಾಧಾರಿತ ಬದುಕು ಮನಸ್ಸನ್ನು ಅರಳಿಸುತ್ತದೆ ಎಂದು ವಿವರಿಸಿದರು.

ಶಿಕ್ಷಕರಾದ ಶ್ರೀ ವೀರೇಶ್ ಪಾಟೀಲ್‌ರವರು ಸಾಮಾಜಿಕ ಜವಾಬ್ದಾರಿಯ ಹಿನ್ನೆಲೆಯಲ್ಲಿ ಶಿಕ್ಷಕರು ವರ್ತಿಸಬೇಕು. ಮಕ್ಕಳಲ್ಲಿ ಅಪರಿಮಿತವಾದ ಉತ್ಸಾಹವನ್ನು ಕಂಡಾಗ ಶಿಕ್ಷಕರು ಪ್ರೋತ್ಸಾಹಿಸಿ ಮಗುವಿನ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು ಎಂದರು.

---

## ದೃಢವಾದ ನಂಬಿಕೆಯಿಂದ ಎಲ್ಲಾ ಕಾರ್ಯ ಸಾಧ್ಯ

**ಸ್ವಾಮಿ ಶ್ರೀ ವೀರೇಶಾನಂದ ಸರಸ್ವತಿ**

ಮನುಷ್ಯನಿಗೆ ಯಾವುದೇ ಕಾರ್ಯ ಸಾಧಿಸಲು ನಂಬಿಕೆ ಅಗತ್ಯ. ದೃಢವಾದ ನಂಬಿಕೆ ಇದ್ದರೆ ಯಾವುದೇ ಕಾರ್ಯವನ್ನು ಮಾಡಬಹುದು ಎಂದು ತುಮಕೂರಿನ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ಶ್ರೀ ವೀರೇಶಾನಂದ ಸರಸ್ವತಿಯವರು ಸುತ್ತೂರು ಶ್ರೀಕ್ಷೇತ್ರದಲ್ಲಿ ವೈದ್ಯರಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದ ಸಮಾರೋಪ ಸಮಾರಂಭದಲ್ಲಿ ತಿಳಿಸಿದರು. ನಂಬಿಕೆಯೇ ಇಲ್ಲದಿದ್ದರೆ ಪ್ರೀತಿಯ ಮಾತೆಲ್ಲಿ? ನಂಬಿಕೆ, ಅನುಮಾನ ಒಂದೇ ಸ್ಥಳದಲ್ಲಿ ಇರಲು ಸಾಧ್ಯವಿಲ್ಲ. ಅನುಮಾನವನ್ನು ಹತ್ತಿಕ್ಕುವುದಕ್ಕಿಂತ ನಂಬಿಕೆ ಮೇಲೆ ವಿಶ್ವಾಸವಿಡುತ್ತಾ ಹೋಗಬೇಕು. ಆಗ ಅನುಮಾನ ತಣ್ಣಗೆ ಜಾಗ ಖಾಲಿ ಮಾಡುತ್ತದೆ, ಪ್ರೀತಿ ಆಳಕ್ಕೆ ಇಳಿಯುತ್ತಾ ಹೋಗುತ್ತದೆ. ವೈದ್ಯರು ರೋಗಿಗಳ ಬಗ್ಗೆ ಕಾಳಜಿ ಮತ್ತು ಪ್ರೀತಿಯನ್ನು ಹೊಂದಬೇಕು. ರೋಗಿಗಳು ವೈದ್ಯರ ಮೇಲೆ ಮತ್ತು ಅವರು ನೀಡುವ ಔಷಧಿಯ ಮೇಲೆ ವಿಶ್ವಾಸ, ನಂಬಿಕೆಯನ್ನು ಇಡಬೇಕು. ರೋಗಿಗಳಲ್ಲಿ ಸಹಾನುಭೂತಿ ಹೊಂದಿರುವ ವೈದ್ಯರಾಗಿರಿ. ರೋಗಿಗಳ ಮತ್ತು ಅವರ ಕುಟುಂಬಗಳೊಂದಿಗೆ ಪ್ರೀತಿ, ವಿಶ್ವಾಸದಿಂದ ಮಾತನಾಡಿ ನಿಮ್ಮ ಮೇಲೆ ನಂಬಿಕೆ ಬರುವಂತೆ ನಡೆದುಕೊಳ್ಳಬೇಕು ಎಂದು ತಿಳಿ ಹೇಳಿದರು.



ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ಶ್ರೀ ವೀರೇಶಾನಂದ ಸರಸ್ವತಿಯವರು ವೈದ್ಯರಿಗೆ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಉಪನ್ಯಾಸ ನೀಡುತ್ತಿರುವುದು

ಬೆಂಗಳೂರಿನ ಪ್ರಿವೆಂಟಿವ್ ಹೆಲ್ತ್ ಕೇರ್ ಮತ್ತು ಥೆರಾಪಿಯಟಿಕ್ ಯೋಗದ ಸಲಹೆಗಾರರಾದ ಡಾ. ಶ್ರೀಧರ್ ದೇಶಮುಖರವರು ಮಾತನಾಡಿ ಪೌಷ್ಟಿಕತೆಯ ಕೊರತೆ ಮತ್ತು ಮನಸ್ಸಿನ ನಡುವೆ ಬಲವಾದ ಸಂಬಂಧವಿದೆ. ಮನುಷ್ಯರಿಗೆ ಆಹಾರ ಮುಖ್ಯ. ದಿನನಿತ್ಯದ ಕೆಲಸ ಮಾಡಲು ನಮಗೆ ಶಕ್ತಿ ಬೇಕು. ಈ ಶಕ್ತಿ ನಾವು ಸೇವಿಸುವ ಆಹಾರದಿಂದಲೇ ಸಿಗುತ್ತದೆ. ಸಾತ್ವಿಕ ಆಹಾರವು ಸಾವಯವ ರೀತಿಯಲ್ಲಿ ಬೆಳೆದ ತಾಜಾ ತರಕಾರಿ ಹಣ್ಣುಗಳಲ್ಲಿರುತ್ತದೆ ಮತ್ತು ಇದು ಸೇವಿಸಿದವರನ್ನು ಉತ್ಸಾಹಭರಿತರನ್ನಾಗಿ ಇರಿಸುತ್ತದೆ ಎಂದು ತಿಳಿಸಿದರು.

ಡಾ. ಗುರುದತ್ತ, ಡಾ. ಆಶಾ, ಡಾ. ಸುಮನ್, ಡಾ. ಹೇಮಲತಾ ಹಾಗೂ ಡಾ. ಸರಸ್ವತಮ್ಮನವರು ಅನಿಸಿಕೆಗಳನ್ನು ಹಂಚಿಕೊಂಡರು. ಡಾ. ಪುರುಷೋತ್ತಮ ಶಾಸ್ತ್ರಿಯವರು ಶಿಬಿರದ ವರದಿಯನ್ನು ಓದಿದರು. ಡಾ. ಕೆ.ಬಿ. ಚೇತಕ್ ಸ್ವಾಗತಿಸಿದರು. ಡಾ. ಕೆ.ಬಿ. ಸುಮಾ ವಂದಿಸಿದರು.

---

## ಉತ್ತಮ ಹವ್ಯಾಸಗಳು ಬದುಕಿಗೆ ಅವಶ್ಯಕ

ಶ್ರೀ ಸಿ.ಪಿ. ರಾಮಶೇಷು

ಬದುಕಿನಲ್ಲಿ ಉತ್ತಮ ಹವ್ಯಾಸಗಳನ್ನು ಅಳವಡಿಸಿಕೊಂಡಾಗ ಮಾನಸಿಕ ಒತ್ತಡದಿಂದ ದೂರವಿರಬಹುದು ಎಂದು ಆಧ್ಯಾತ್ಮಿಕ ಜಿಜ್ಞಾಸುಗಳಿಗಾಗಿ ಆಯೋಜಿಸಿರುವ ಅಧ್ಯಯನ ಶಿಬಿರದ ಚಿಂತನ–ಮಂಥನ ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀ ಸಿ.ಪಿ. ರಾಮಶೇಷುರವರು ತಿಳಿಸಿದರು.

ಸಂಗ್ರಹಿಸುವುದು, ತಯಾರಿಸುವುದು, ಭಾಗವಹಿಸುವುದು, ಕಲಾನ್ವೇಷಣೆ, ಪ್ರದರ್ಶನ ಮತ್ತು ಆಟೋಟಗಳಾಗಿ ಹವ್ಯಾಸಗಳನ್ನು ವಿಂಗಡಿಸಬಹುದು. ನಮ್ಮ ದಿನಚರಿ ನೋಡಿದರೆ ತಿಳಿಯುತ್ತದೆ ಯಾವ ಯಾವ ಹವ್ಯಾಸಗಳು ಮೈಗೂಡಿವೆ ಎಂದು. ಉತ್ತಮ ಹವ್ಯಾಸಗಳು ಆರೋಗ್ಯದಾಯಕ. ಆಧ್ಯಾತ್ಮಿಕ ಸಾಧಕರ ಹವ್ಯಾಸಗಳೆಂದರೆ ಸತ್ಸಂಗದಲ್ಲಿ ತೊಡಗುವುದು, ಸ್ವಾಧ್ಯಾಯ, ಪ್ರವಚನಗಳಲ್ಲಿ ಭಾಗವಹಿಸುವುದು ಮತ್ತು ಆಲಿಸುವುದು, ಯೋಗಾಭ್ಯಾಸ, ಧ್ಯಾನ, ಲೇಖನಗಳನ್ನು ಬರೆದು ಪ್ರಕಟಿಸುವುದು, ಪ್ರವಾಸ, ತೀರ್ಥಯಾತ್ರೆ, ಧನಾತ್ಮಕ ಚರ್ಚೆಗಳಲ್ಲಿ ಭಾಗವಹಿಸುವುದು ಇನ್ನೂ ಮುಂತಾದವುಗಳು ಒಳ್ಳೆಯ ಹವ್ಯಾಸಗಳಾಗಿವೆ. ತತ್ವಜ್ಞಾನಿ ಬರ್ಟ್ರಾಂಡ್ ರಸೆಲ್‌ರವರು ಹೇಳುವಂತೆ ಉತ್ತಮ ಹವ್ಯಾಸಗಳಿದ್ದರೆ ಜೀವನದಲ್ಲಿ ಸಂತೋಷಪಡಲು ಮತ್ತು ಸಂಭ್ರಮಿಸಲು ಅವಕಾಶಗಳಿವೆ ಎಂದು ಉದಾಹರಣೆಗಳ ಮೂಲಕ ತಿಳಿಸಿದರು.



ಚಿಂತನ–ಮಂಥನದಲ್ಲಿ ಪಾಲ್ಗೊಂಡಿದ್ದ ಆಧ್ಯಾತ್ಮಿಕ ಜಿಜ್ಞಾಸುಗಳು

# ಪ್ರಗತಿಗೆ ಉದ್ಯಮಶೀಲತೆ ಅತ್ಯವಶ್ಯಕ

ಡಾ. ವಿವೇಕ್ ಜವಳಿ

ಸಾರ್ವಜನಿಕ ಆರೋಗ್ಯ ರಕ್ಷಣೆಯ ವ್ಯವಸ್ಥೆ, ಸ್ವಯಂ ಸಮರ್ಥ ಮತ್ತು ಅಭಿವೃದ್ಧಿ ಹೊಂದಿದ ಆರ್ಥಿಕತೆಯ ಪ್ರಗತಿಗೆ ಉದ್ಯಮಶೀಲತೆಯು ಅತ್ಯವಶ್ಯಕ ಎಂದು ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯ ಮುಖ್ಯಸ್ಥರಾದ ಡಾ. ವಿವೇಕ್ ಜವಳಿಯವರು ಸುತ್ತೂರು ಶ್ರೀಕ್ಷೇತ್ರದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದ ಸಮಾರೋಪ ಸಮಾರಂಭದಲ್ಲಿ ತಿಳಿಸಿದರು. ವೈದ್ಯಕೀಯ ವಾಣಿಜ್ಯೋದ್ಯಮದಲ್ಲಿ ಅಡೆತಡೆಗಳ ಜೊತೆಗೆ ಉದ್ಯಮವನ್ನು ಅಭಿವೃದ್ಧಿಪಡಿಸಲು, ಸಂಘಟಿಸಲು ಮತ್ತು ನಿರ್ವಹಿಸಲು ಸಾಮರ್ಥ್ಯ ಮತ್ತು ಸ್ವಇಚ್ಛೆ ಅತಿ ಮುಖ್ಯ. ಮಾರುಕಟ್ಟೆಯ ಸಂಶೋಧನೆಯ ಮೂಲಕ ಅಗತ್ಯ ಮೌಲ್ಯಮಾಪನ ಮಾಡಿ ಸರಿಯಾದ ಹೂಡಿಕೆಯನ್ನು ಆಯ್ಕೆ ಮಾಡುವುದರ ಮೂಲಕ ಯಶಸ್ವಿ ಉದ್ಯಮಿಯಾಗಲು ಸಾಧ್ಯ ಎಂದರು.

ಕಿಮ್ಸ್‌ನ ಮಾಜಿ ನಿರ್ದೇಶಕರಾದ ಡಾ. ಜಿ.ಎಸ್. ವೆಂಕಟೇಶ್‌ರವರು ರೋಗದ ಲಕ್ಷಣಗಳನ್ನು ಅರ್ಥ ಮಾಡಿಕೊಳ್ಳುವ ವೈದ್ಯರ ಸಾಮರ್ಥ್ಯ ಅವರು ನೀಡುವ ಔಷಧಿಗಿಂತಲೂ ಹೆಚ್ಚು ಮಹತ್ವದ್ದು, ಚಿಕಿತ್ಸೆಗಿಂತ ರೋಗ ನಿಧಾನವೆ ಮುಖ್ಯ. ವೈದ್ಯನ ಬಳಿ ಎಷ್ಟೇ ಔಷಧಿಗಳಿದ್ದರು ರೋಗದ ಮೂಲ ಮತ್ತು ಲಕ್ಷಣಗಳನ್ನು ಗುರುತಿಸುವುದು ಸಾಧ್ಯವಾಗದಿದ್ದಲ್ಲಿ ಆ ಔಷಧಿಗಳೆಲ್ಲ ನಿಷ್ಪ್ರಯೋಜಕ. ವೈದ್ಯ ವೃತ್ತಿಯಲ್ಲಿ ಯಶಸ್ವಿಯಾಗಲು ಸಹಾನುಭೂತಿ, ದೃಢವಾದ ಕಾರ್ಯನೀತಿ, ವೃತ್ತಿಪರತೆ, ಜ್ಞಾನ, ವಿಶ್ವಾಸಾರ್ಹತೆ ಮತ್ತು ಉತ್ಸಾಹ ಅತಿ ಮುಖ್ಯ ಎಂದು ತಿಳಿಸಿದರು.

ಶಿಬಿರಾರ್ಥಿಗಳಾದ ಸಾರ್ಥಕ್, ಸಿಮ್ಲುಮ್, ಕ್ಷಿತಿಜ್‌ರವರುಗಳು ಶಿಬಿರವು ತುಂಬಾ ಉಪಯುಕ್ತವಾಗಿತ್ತು ಹಾಗೂ ಅಚ್ಚುಕಟ್ಟಾಗಿ ನಡೆಯಿತೆಂದು ಅಭಿಪ್ರಾಯಪಟ್ಟರು. ಡಾ. ಪ್ರೀತಿ ಪ್ರಭು ಶಿಬಿರದ ವರದಿಯನ್ನು ಓದಿದರು. ಡಾ. ಸುರೇಶ್‌ಬಾಬು ಸ್ವಾಗತಿಸಿದರು. ಡಾ. ಎಸ್. ರಾಜೇಂದ್ರಪ್ರಸಾದ್ ವಂದಿಸಿದರು.




ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯ ವೈದ್ಯರಾದ ಡಾ. ವಿವೇಕ್ ಜವಳಿಯವರು ಉಪನ್ಯಾಸ ನೀಡುತ್ತಿರುವುದು

# ಗುರುಗಳು ಶಿಷ್ಯರ ಮನಸ್ಸನ್ನು ಗೆಲ್ಲುವಂತಿರಬೇಕು

**ಡಾ. ಎಚ್.ವಿ. ನಾಗರಾಜ್‌ರಾವ್**

ಗುರುಗಳಾದವರು ಶಿಷ್ಯರ ಮನಸ್ಸನ್ನು ಗೆಲ್ಲುವಂತವರಾಗಬೇಕು ಎಂದು ಸಂಸ್ಕೃತ ವಿದ್ವಾಂಸರಾದ ಡಾ. ಎಚ್.ವಿ. ನಾಗರಾಜ್‌ರಾವ್‌ರವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿಕ್ಷಕರಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅಭಿಪ್ರಾಯಪಟ್ಟರು.



ಶಿಕ್ಷಕರಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಸಂಸ್ಕೃತ ವಿದ್ವಾಂಸರಾದ ಡಾ. ಎಚ್.ವಿ. ನಾಗರಾಜ್‌ರಾವ್‌ರವರು ಉಪನ್ಯಾಸ ನೀಡುತ್ತಿರುವುದು

ಗುರುಗಳು ಗಣಿತ, ವಿಜ್ಞಾನ ಇತ್ಯಾದಿ ಜ್ಞಾನವನ್ನು ನೀಡಬೇಕು. ಅದರೆ ಬದುಕುವ ಜ್ಞಾನ ಅದಕ್ಕಿಂತಲೂ ಮಿಗಿಲು. ಗುರುವಾದವರು ಮೊದಲು ಜ್ಞಾನ ಪಡೆದುಕೊಂಡಿದ್ದರೆ ಮಾತ್ರ ಶಿಷ್ಯರಿಗೆ ಅದನ್ನು ಧಾರೆ ಎರೆಯಲು ಸಾಧ್ಯ. ಗುರು ಡಂಭಾಚಾರವಿರದೆ ಪರಿಶುದ್ಧತೆಯಿಂದ ಇರಬೇಕು, ಗರ್ವಿಯಾಗಿರ ಬಾರದು. ಒಳ್ಳೆಯ ಗುರುವಾಗಬೇಕಾದರೆ ಮೊದಲು ಒಳ್ಳೆಯ ವಿದ್ಯಾರ್ಥಿಯಾಗಿರಬೇಕು. ಪ್ರಪಂಚದಲ್ಲಿ ತಿಳಿಯ ಬೇಕಾದ ವಿಷಯಗಳು ಅಗಣಿತವಾಗಿವೆ. ದ್ವಂದ್ವ ವಿರಹಿತನಾಗಿ ಇಂದ್ರಿಯ ನಿಗ್ರಹಿಯಾಗಿರ ಬೇಕು. ಹಾಗೆಯೆ ಶಿಷ್ಯನಾದವನು ತನ್ನ ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡು ವಿದ್ಯೆಯನ್ನು ಕಲಿಯಲು ಸಿದ್ಧನಿರಬೇಕು. ಪರಿಶ್ರಮ, ಗುರುವಿನ ಮಾರ್ಗದರ್ಶನ ಹಾಗೂ ನಿರಂತರ ಅಧ್ಯಯನದಿಂದ ಮಾತ್ರ ವಿದ್ಯೆಯನ್ನು ಕಲಿಯಲು ಸಾಧ್ಯ ಎಂದರು.

ಪ್ರಜಾವಾಣಿ ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ರವೀಂದ್ರ ಭಟ್‌ರವರು ವರದಿ ಒಂದು ನಿರ್ದಿಷ್ಟ ವಾಚಕವೃಂದಕ್ಕೆ ಕೇಂದ್ರೀಕೃತವಾಗಿದ್ದು, ಮಹತ್ವದ ಒಳ ಅಂಶಗಳನ್ನು ನೀಡುವ ಖಜಾನೆಯಾಗಿದೆ. ವರದಿ ಮಾಡುವಾಗ ವಿಷಯದ ಆಯ್ಕೆ ಬಹುಮುಖ್ಯ. ಅದು ಆಕರ್ಷಣೀಯ ಶೀರ್ಷಿಕೆ, ಅರ್ಥಪೂರ್ಣ ವಿಚಾರವಿನಿಮಯ, ಸಹೃದಯರ ಮನದ ಮೇಲೆ ಧನಾತ್ಮಕ ಪರಿಣಾಮ ಬೀರುವಂತಿರಬೇಕು. ವರದಿಯನ್ನು ಬರೆಯುವಾಗ ಬಳಸುವ ಭಾಷೆ ಮತ್ತು ಪದಗಳು ಸರಳವಾಗಿರಬೇಕು; ವಾಕ್ಯಗಳು ಚಿಕ್ಕದಾಗಿದ್ದಷ್ಟೂ ಒಳ್ಳೆಯದು. ವರದಿಯನ್ನು ಬರೆಯುವ ಉದ್ದೇಶ ಏನೇ ಆದರೂ ಮಾನವೀಯ ಆಸಕ್ತಿ ಇರುವಂತಿರಬೇಕು. ಇವೆಲ್ಲವುಗಳ ಜೊತೆ ಪ್ರಾದೇಶಿಕತೆಯ ಅರಿವು ಇರಬೇಕು ಎಂದು ತಿಳಿಸಿದರು.

ಶಿಬಿರಾರ್ಥಿಗಳಾದ ಶ್ರೀ ಸದಾಶಿವ ಮೇತ್ರಿ, ಶ್ರೀ ಎಸ್.ಎನ್. ಬಸವರೆಡ್ಡಿ ಹಾಗೂ ಶ್ರೀಮತಿ ಶೋಭಾ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

# ಮನಸ್ಸಿನ ನಿಗ್ರಹ ಮೋಕ್ಷಕ್ಕೆ ಮಾರ್ಗ

**ಪ್ರೊ. ಕೆ. ಅನಂತರಾಮು**

'ಮನಸ್ಸಿನ ನಿಗ್ರಹ ಮೋಕ್ಷಕ್ಕೆ ಮಾರ್ಗ' ಎಂದು ಪ್ರೊ. ಕೆ. ಅನಂತರಾಮುರವರು ಅಭಿಪ್ರಾಯಪಟ್ಟರು. ಅವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳಿಗಾಗಿ ಆಯೋಜಿಸಿದ್ದ ಅಧ್ಯಯನ ಶಿಬಿರದಲ್ಲಿ ಶ್ರೀ ಸರ್ಪಭೂಷಣ ಶಿವಯೋಗಿಗಳವರ 'ಕೈವಲ್ಯ ಕಲ್ಪವಲ್ಲರಿ' ಗ್ರಂಥ ಕುರಿತು ಉಪನ್ಯಾಸ ನೀಡುತ್ತಾ ಹಠಯೋಗವು ಅತ್ಯಂತ ಸೂಕ್ಷ್ಮವಾದ, ಚಂಚಲಯುಕ್ತವಾದ ಮನಸ್ಸನ್ನು ಹಿಡಿದು ನಿಲ್ಲಿಸಿ ಕ್ಷಣಕ್ಷಣವು ಬಿಡಲಾರದೆ ಹಠದಿಂದ ಸಾಧಿಸುವಂತಹುದಾಗಿದೆ. ಮನಸ್ಸು ಸ್ವಭಾವತಃ ಚಂಚಲವಾದದ್ದು, ಕ್ಷೋಭೆಯನ್ನುಂಟುಮಾಡುವ ಸ್ವಭಾವ ಉಳ್ಳದ್ದು, ಬಲವಂತವಾದದ್ದು ಮತ್ತು ದೃಢವಾದದ್ದು. ಮನಸ್ಸನ್ನು ನಿಲ್ಲಿಸುವುದು ಕಷ್ಟವೆ ಸರಿ, ಆದರೂ ಕೂಡ ಈ ಮನಸ್ಸನ್ನು ನಿರಂತರ ಅಭ್ಯಾಸ ಹಾಗೂ ವೈರಾಗ್ಯದಿಂದ ನಿಗ್ರಹಿಸಲು ಸಾಧ್ಯ. ಶ್ವಾಸ-ಉಚ್ಛ್ವಾಸ ಎಂಬ ವಾಹಕದ ಮೇಲೆ ಈ ಮನಸ್ಸು ಸಂಚರಿಸುತ್ತಲಿದೆ. ಈ ಮನಸ್ಸನ್ನು ಹಿಡಿಯಬೇಕೆಂದರೆ ವಾಹನವಾದ ಪ್ರಾಣವಾಯುವನ್ನು ಹಿಡಿಯಬೇಕು. ಪ್ರಾಣವಾಯುವನ್ನು ರೇಚಕ, ಪೂರಕಗಳಿಂದ ತಡೆದು ಕುಂಭಕದಲ್ಲಿ ನಿಲ್ಲಿಸಬೇಕು. ಹಾಗೆ ಪ್ರಾಣವಾಯುವನ್ನು ಕುಂಭಕಮಾಡಿ ತನ್ನ ಭ್ರೂಮಧ್ಯದಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತಲಿರುವಂತಹ ಜ್ಯೋತಿಯನ್ನು ನಿರಂತರವಾಗಿ ನೋಡುತ್ತಲಿದ್ದರೆ ಅದರಿಂದ ಮೋಕ್ಷ ಮಾರ್ಗ ಕಂಡುಕೊಳ್ಳಬಹುದು ಎಂದು ತಿಳಿಸಿದರು.

ಮಹಾಲಿಂಗಪುರದ ಶ್ರೀ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಶ್ರೋ. ಬ್ರ. ಶ್ರೀ ಸಹಜಾನಂದ ಸ್ವಾಮಿಗಳು ದುಷ್ಟ ಗುಣ ಸ್ವಭಾವದ ಪುರುಷನು ಜ್ಞಾನಿಯ ಸಮೀಪದಲ್ಲಿಯೇ ಇರುತ್ತಿದ್ದರೂ ಅವನು ತನ್ನ ದುಷ್ಟ ಗುಣವೃತ್ತಿಗೆ ಹೋಗುವನಲ್ಲದೆ, ತತ್ವಾರ್ಥವನ್ನು ತಿಳಿದೂ ಮನಸ್ಸಿನ ಪರಿವರ್ತನೆಯಾಗದು. ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ ಎಂಬಂತೆ ತನ್ನ ಹೀನ ನಡವಳಿಕೆಯೇ ಅವನ ಸ್ವಭಾವವಾಗಿರುವುದರಿಂದ ಅವನು ಆ ಹೀನ ವೃತ್ತಿಯನ್ನು ಬಿಟ್ಟು ತತ್ವಾರ್ಥ ತಿಳಿದು ನಡೆಯಲಾರನು. ಕಪ್ಪೆಯು ಮಲ್ಲಿಗೆ ಹೂವಿನ ಕಂಟಿಯ ಕೆಳಗೆ ವಾಸ ಮಾಡುತ್ತಿದ್ದರೂ ಕಲುಷಿತ ನೀರನ್ನೆ ಕುಡಿದು ಬದುಕುವುದೆ ವಿನಃ ಅದು ಮಲ್ಲಿಗೆಯ ಸುಗಂಧವನ್ನು ಗ್ರಹಿಸಲಾರದು. ಮನುಷ್ಯನಾದವನು ಉತ್ತಮ ಹಾಗೂ ಸ್ವಚ್ಛ ಪರಿಸರದಲ್ಲಿ ಒಳ್ಳೆಯ ಮನಸ್ಸು-ಗುಣ-ಸ್ವಭಾವದವನಾಗಿದ್ದು, ಸಜ್ಜನರ ಸತ್ಸಂಗದಲ್ಲಿದ್ದರೆ ಹೆಜ್ಜೇನು ಸವಿದಂತೆ ಎಂದು ವಿವರಿಸಿದರು.

ಡಾ. ಆರ್.ಕೆ. ವಸಂತ್‌ಕುಮಾರ್‌ರವರು ಭಾರತೀಯ ಸಂಪ್ರದಾಯದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಬಳಸಿಕೊಂಡು ಹೇಗೆ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ಪ್ರಾತ್ಯಕ್ಷಿಕೆ ಮೂಲಕ ಜಿಜ್ಞಾಸುಗಳಿಗೆ ಅರ್ಥಗರ್ಭಿತವಾಗಿ ತಿಳಿಸಿದರು.




ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ ಅಧ್ಯಯನ ಶಿಬಿರವನ್ನು ಮಹಾಲಿಂಗ ಪುರದ ಶ್ರೀ ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮದ ಶ್ರೋ. ಬ್ರ. ಶ್ರೀ ಸಹಜಾನಂದ ಸ್ವಾಮಿಗಳು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಸ್ವಾಮಿ ಬುದ್ಧಿಯೋಗಾ ನಂದರು, ಶ್ರೀ ಶಿವಾನಂದ ಸ್ವಾಮಿಗಳು, ಶ್ರೀ ಇಮ್ಮಡಿ ಗುರುಲಿಂಗ ಸ್ವಾಮಿಗಳು, ಪ್ರೊ. ಕೆ. ಅನಂತರಾಮು, ಶ್ರೀ ಚಿದಾನಂದ ಸ್ವಾಮಿಗಳು ಹಾಗೂ ಇತರ ಶಿಬಿರಾರ್ಥಿಗಳನ್ನು ಕಾಣಬಹುದು

## ಎಸ್‌ಎಸ್‌ಎಲ್‌ಸಿ ಫಲಿತಾಂಶ

### ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಗೆ ಶೇ.93 ಫಲಿತಾಂಶ

ಕನ್ನಡ ಮಾಧ್ಯಮದಲ್ಲಿ ಅತಿ ಹೆಚ್ಚು ಅಂಕ ಪಡೆದವರು



ಅಭಿಷೇಕ್ ಶೇಖರಪ್ಪ ಉಳ್ಳಾಗಡ್ಡಿ (588/625)



ಅನುರಾಧ (587/625)

ಆಂಗ್ಲ ಮಾಧ್ಯಮದಲ್ಲಿ ಅತಿ ಹೆಚ್ಚು ಅಂಕ ಪಡೆದವರು



ಎಲ್. ಸಂತೋಷ್ (606/625)



ನರೇಂದ್ರಕುಮಾರ್ ರೆಡ್ಡಿ (605/625)

ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ ಒಟ್ಟು 509 ವಿದ್ಯಾರ್ಥಿಗಳು ಹಾಜರಾಗಿದ್ದು, 473 ವಿದ್ಯಾರ್ಥಿಗಳು ಉತ್ತೀರ್ಣರಾಗಿ, ಶೇ.93 ರಷ್ಟು ಫಲಿತಾಂಶ ಲಭಿಸಿದೆ. 110 ವಿದ್ಯಾರ್ಥಿಗಳು 500ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಅತ್ಯುನ್ನತ ದರ್ಜೆಯಲ್ಲಿ 60, ಪ್ರಥಮ ದರ್ಜೆಯಲ್ಲಿ 72, ದ್ವಿತೀಯ ದರ್ಜೆಯಲ್ಲಿ 325 ಹಾಗೂ 16 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಆಂಗ್ಲ ಮಾಧ್ಯಮದಲ್ಲಿ ಎಲ್. ಸಂತೋಷ್ 606 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮನಾದರೆ ನರೇಂದ್ರಕುಮಾರ್ ರೆಡ್ಡಿ 605 ಅಂಕಗಳನ್ನು ಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಆಂಗ್ಲ ಮಾಧ್ಯಮದಲ್ಲಿ ಶಾಲೆಗೆ 91.62% ರಷ್ಟು ಫಲಿತಾಂಶ ಲಭಿಸಿದೆ.

ಕನ್ನಡ ಮಾಧ್ಯಮದಲ್ಲಿ ಅಭಿಷೇಕ್ ಶೇಖರಪ್ಪ ಉಳ್ಳಾಗಡ್ಡಿ 588 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮನಾದರೆ ಅನುರಾಧ 587 ಅಂಕಗಳನ್ನು ಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಶೇ. 93.57 ರಷ್ಟು ಫಲಿತಾಂಶ ಲಭಿಸಿದೆ.

ಪ್ರಥಮ ಭಾಷೆ ಕನ್ನಡದಲ್ಲಿ ವಿದ್ಯಾರ್ಥಿಗಳಾದ ಆನಂದ್, ರಮೇಶ್‌ಕುಮಾರ್, ಬಸವರಾಜ, ರವಿ ಯಲ್ಲಪ್ಪ ತೋಪಲಕಟ್ಟಿ, ಅನಿತ ಪ್ರಕಾಶ್ ಸೊರಬದ, ರಾಯಪ್ಪ, ಸಂಗಮೇಶ, ಶಿವಕುಮಾರ್, ರೇಣುಕಸ್ವಾಮಿ ಪೂರ್ಣಾಂಕಗಳನ್ನು ಗಳಿಸಿದ್ದಾರೆ.

ಆಂಗ್ಲ ಭಾಷೆಯಲ್ಲಿ ಬಿ.ಜೆ. ಮಂಜುನಾಥ್, ಎಚ್.ಕೆ. ಅನುಷ, ಎಲ್. ಸಂತೋಷ್, ಆರ್. ಅಮೃತ ಪೂರ್ಣಾಂಕ ಗಳಿಸಿರುತ್ತಾರೆ. ಸಂಸ್ಕೃತದಲ್ಲಿ ಬಿ.ಎಚ್. ಈಶ್ವರ, ಹೃತಿಕಾ, ಬಿ. ಅಭಿಷೇಕ್, ಮಲ್ಲಿಕಾರ್ಜುನ ದೇಸಾಯಿ, ಮಲ್ಲಿಕಾರ್ಜುನ ಗದಿಗೆಪ್ಪ ದೇವರು ಪೂರ್ಣಾಂಕ ಗಳಿಸಿ ಸಾಧನೆಗೈದಿದ್ದಾರೆ. ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸುತ್ತೂರು ಸಂಸ್ಥೆಯ ಆಡಳಿತಾಧಿಕಾರಿಗಳು, ಸಂಯೋಜನಾಧಿಕಾರಿಗಳು, ಮುಖ್ಯಸ್ಥರು, ಮುಖ್ಯೋಪಾಧ್ಯಾಯರು, ಬೋಧಕ ಹಾಗೂ ಬೋಧಕೇತರ ವರ್ಗದವರು ಅಭಿನಂದಿಸಿದ್ದಾರೆ.

## ಕನ್ನಡ ಭಾಷೆಯಲ್ಲಿ ಪೂರ್ಣಾಂಕ ಪಡೆದವರು


ಸಂಗಮೇಶ ತಾರನಾಳ


ರವಿ ಯಲ್ಲಪ್ಪ ತೋಪಲಕಟ್ಟಿ


ರಾಯಪ್ಪ


ಅನಿತ ಸೊರಬದ


ಆನಂದ


ರಮೇಶ್‌ಕುಮಾರ್


ಶಿವಕುಮಾರ್


ಬಸವರಾಜ


ರೇಣುಕಸ್ವಾಮಿ

## ಆಂಗ್ಲ ಭಾಷೆಯಲ್ಲಿ ಪೂರ್ಣಾಂಕ ಪಡೆದವರು


ಬಿ.ಜೆ. ಮಂಜುನಾಥ್


ಎಚ್.ಕೆ. ಅನುಷ


ಎಲ್. ಸಂತೋಷ್


ಆರ್. ಅಮೃತ

## ಸಂಸ್ಕೃತ ಭಾಷೆಯಲ್ಲಿ ಪೂರ್ಣಾಂಕ ಪಡೆದವರು


ಬಿ.ಎಚ್. ಈಶ್ವರ


ಹೃತಿಕಾ


ಬಿ. ಅಭಿಷೇಕ್


ಮಲ್ಲಿಕಾರ್ಜುನ ದೇಸಾಯಿ


ಮಲ್ಲಿಕಾರ್ಜುನ ಗದಿಗೆಪ್ಪ

## 2018-19 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮೇಟಗಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆ ವಿದ್ಯಾರ್ಥಿಗಳು


ಜಿ. ಶಶಾಂಕ್
615


ಎಂ.ಎಲ್. ಸುಮನ್
614


ಡಿ.ಎನ್. ನಮ್ರತ
606


ಆರ್. ಕೋಕಿಲಾ
586


ಪಿ. ನಿಸರ್ಗ
580


ಕೆ. ರಶ್ಮಿತ
576


ಎಂ.ಎಸ್. ಏಕತಾ
574


ಬಿ.ಆರ್. ರಮ್ಯಾ
574


ಕೆ.ಎಸ್. ಗುರುದರ್ಶನ್
570


ಎಂ. ಶಶಾಂಕ್
547


ಸ್ನೇಹ ಪುಂಡಲೀಕ್ ಮಾನೆಪ್ಪಗೋಳ್
544


ಪಿ.ಎಸ್. ಚಿನ್ಮಯ್
526


ಆರ್. ಮಾನಸ
526


ಕೆ. ದೀಪಶ್ರೀ
525


ಎಸ್. ದಿನೇಶ್‌ಕುಮಾರ್
517


ಎಸ್.ಆರ್. ಅನ್ವೇಶ್
508


ಕುಂಕುಂ
506


ಎಸ್.ಎನ್. ಸಿಂಚನ್
504

## 2018-19 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಹನೂರು ತಾಲ್ಲೂಕಿನ ಬಂಡಳ್ಳಿ ಜೆಎಸ್‌ಎಸ್ ಪ್ರೌಢಶಾಲೆ ವಿದ್ಯಾರ್ಥಿಗಳು



ಎಸ್. ಸುಮ
569



ಎಂ. ಅನುಕುಮಾರಿ
560



ಮುಸ್ಕಾನ್‌ಭಾನು
534



ಎಚ್.ಎಸ್. ಸಂಗೀತ
521



ಮಾಲ್ವಿಯಾಷರ್ವಾನಾಜ್
518



ಎಸ್. ಶ್ರೀನಿವಾಸ್
518



ಬಿ. ಅನುಶ್ರೀ
515



ಪಿ. ರಕ್ಷಿತಾ
515



ಎಸ್. ಸುಚಿತ್ರ
511

**ಜೆಎಸ್‌ಎಸ್ ಸಂಸ್ಥೆಗಳಲ್ಲಿ ನಡೆಯುವ ಕಾರ್ಯಕ್ರಮದ ವರದಿಗಳು**
**ಮತ್ತು ಛಾಯಾಚಿತ್ರಗಳನ್ನು**
**ಜೆಎಸ್‌ಎಸ್ ಮಾಸಪತ್ರಿಕೆಯ**
**ಈ ಕೆಳಕಂಡ ಇಮೇಲ್‌ಗೆ ಕಳುಹಿಸುವುದು**
**email:jssmasapatrike@gmail.com**

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಬಾಗೆ

2019 ರ ಮಾರ್ಚ್‌ನಲ್ಲಿ ನಡೆದಿದ್ದ ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಯಲ್ಲಿ ಸಕಲೇಶಪುರ ತಾಲ್ಲೂಕಿನ ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯು ಶೇ. 100 ರಷ್ಟು ಫಲಿತಾಂಶ ಪಡೆದಿದೆ. ಪರೀಕ್ಷೆಗೆ ಹಾಜರಾಗಿದ್ದ 53 ವಿದ್ಯಾರ್ಥಿಗಳಲ್ಲಿ 25 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 26 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಮತ್ತು ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಉತ್ತಮ ಫಲಿತಾಂಶದೊಂದಿಗೆ ಶಾಲೆಯ ಕೀರ್ತಿಪತಾಕೆಯನ್ನು ಉತ್ತುಂಗಕ್ಕೊಯ್ದ ವಿದ್ಯಾರ್ಥಿವೃಂದವನ್ನು ಪ್ರಾಂಶುಪಾಲರಾದ ಶ್ರೀ ಬಿ. ಮಧುಕುಮಾರ್ ಹಾಗೂ ಶಿಕ್ಷಕ ವರ್ಗದವರು ಅಭಿನಂದಿಸಿರುತ್ತಾರೆ.


ಎಂ.ಎಸ್. ತೇಜಸ್
93.6%


ಎನ್.ಎಸ್. ಮೌಲ್ಯ
92.8%


ಅನ್ವಿತ ಡೆವಿಡ್
92.4%


ವಿಮರ್ಶ ಎನ್ ಬೆಳ್ಳೂರ್
91.8%


ಯು. ಲಕ್ಷ್ಮಿತಾ ಲೋಕೇಶ್
91.2%


ಎಸ್.ಕೆ. ದೀಕ್ಷ
91%


ಜಿ. ಗಗನ್ ಸ್ವರೂಪ್
90.4%


ಗುಣಸಾಗರ್
90%


ಜೋಯಲ್ ಪಿಂಟೊ
90%


ಬಿ.ಪಿ. ವಿಷ್ಣು
89.2%

**ಶ್ರೀಕ್ಷೇತ್ರದಲ್ಲಿ 2019 ರಲ್ಲಿ ಜರುಗಲಿರುವ**

**ತಿಂಗಳ ಸಾಮೂಹಿಕ ವಿವಾಹ**

**ಜೂನ್–24, ಸೋಮವಾರ**

**ವಿವರಗಳಿಗೆ ಸಂಪರ್ಕಿಸಿ: ಆಡಳಿತಾಧಿಕಾರಿಗಳು**
**ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**

**ದೂರವಾಣಿ ಸಂಖ್ಯೆ : 08221–232559, 232033, 232044**



ಮೈಸೂರು ಮತ್ತು ಊಟಿಯ ಜೆಎಸ್‌ಎಸ್ ಔಷಧ ವಿಜ್ಞಾನ ಕಾಲೇಜುಗಳು ರಾಷ್ಟ್ರೀಯ ರ‍್ಯಾಂಕಿಂಗ್ ಪಟ್ಟಿಯಲ್ಲಿ 8 ಮತ್ತು 10ನೇ ಸ್ಥಾನ ಪಡೆದ ಪ್ರಯುಕ್ತ ನವದೆಹಲಿಯ ವಿಜ್ಞಾನ ಭವನದಲ್ಲಿ ಜರುಗಿದ ಪ್ರಶಸ್ತಿಪ್ರದಾನ ಸಮಾರಂಭದ ಸಂದರ್ಭದಲ್ಲಿ ರಾಷ್ಟ್ರಪತಿಗಳಾದ ಶ್ರೀ ರಾಮನಾಥ್ ಕೋವಿಂದ ಅವರೊಂದಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಹಾಗೂ ಇತರೆ ಅತಿಥಿಗಳು



ಊಟಿಯಲ್ಲಿ ನಡೆದ ಜೀವನೋತ್ಸಾಹ ಶಿಬಿರ -2 ರ ಉದ್ಘಾಟನೆಯನ್ನು ಡಾ. ಬಿ.ಆರ್. ಪೈ ರವರು ನೆರವೇರಿಸಿದರು. ಚಿತ್ರದಲ್ಲಿ ಶಿಬಿರಾರ್ಥಿಗಳನ್ನು ಕಾಣಬಹುದು




ಸುತ್ತೂರು ಶ್ರೀಕ್ಷೇತ್ರದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರವನ್ನು ಡಾ. ಶರ್ಮಾ ವಿ.ಎಸ್.ಎನ್. ರಾಚಕೊಂಡರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಸುಬ್ರದೀಪ್, ಕು. ನಿಖಿತಾ, ಸಂಚಾಲಕರುಗಳಾದ ಡಾ. ವಿಜಯಾ ವಾಗೀಶ್, ಡಾ. ಎಂ. ಸುರೇಶ್ ಬಾಬು, ಡಾ. ಶಿವಪ್ರಕಾಶ್, ಡಾ. ದೇವಾನಂದ, ಡಾ. ಪ್ರೀತಿ ಪ್ರಕಾಶ್ ಹಾಗೂ ಕು. ಸಾಯಿ ಹರ್ಷಿಣಿಯವರುಗಳನ್ನು ಕಾಣಬಹುದು

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 4, Issue No. 17 May 2019**



ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಅಧ್ಯಯನ ಶಿಬಿರದಲ್ಲಿ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು, ಶ್ರೋ. ಬ್ರ. ಶ್ರೀ ಸಹಜಾನಂದ ಸ್ವಾಮಿಗಳು, ಪ್ರೊ. ಕೆ. ಅನಂತರಾಮು ಅವರೊಂದಿಗೆ ಶಿಬಿರದಲ್ಲಿ ಭಾಗವಹಿಸಿದ್ದ ಮಠಾಧಿಪತಿಗಳು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳು



ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ ಸಂದರ್ಭದಲ್ಲಿ ವಿಜೇತ ವಿದ್ಯಾರ್ಥಿಗಳೊಂದಿಗೆ ಶ್ರೀ ಲೋಕೇಶಪ್ಪ, ಡಾ. ಪುರುಷೋತ್ತಮ ಶಾಸ್ತ್ರಿ, ಡಾ. ಎಚ್. ಬಸವನಗೌಡಪ್ಪ, ಡಾ. ಎಂ.ಎಸ್. ಸುಮಾ, ಶ್ರೀ ಎಸ್.ಆರ್. ಸತೀಶ್‌ಚಂದ್ರ, ಡಾ. ಕನ್ವಿರಾಜ್ ಸಿಂಗ್

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು **ಬಿಡಿ ಪ್ರತಿ 10 ರೂ.**